ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

E-Mail: prydirector.edu.sgkar@nic.in

ಸಂಖ್ಯೆ : ಸಿ7(8)/ಆರ್.ಟಿ.ಇ/ಶುಲ್ಕ ಮರುಪಾವತಿ ಹಾ. ದಾಖಲೆ/2017-18 ದಿನಾಂಕ: 12-03-2019

## ಸುತ್ತೋಲೆ

ವಿಷಯ: 2019-20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಸಾಟ್ಸ್‌ನಲ್ಲಿ ಹಾಜರಾತಿ ಹಾಗೂ ಪರೀಕ್ಷೆಗಳ ಮೌಲ್ಯಂಕನ ಅಪ್ ಡೇಟ್ ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರದ ಸಮಸಂಖ್ಯೆ: ದಿ: 16.2.2019

-----

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2019-20ನೇ ಸಾಲಿನ ಆರ್.ಟಿ.ಇ 2ನೇ ಕಂತಿನ ಶುಲ್ಕ ಮರುಪಾವತಿಗೆ ಸಾಟ್ಸ್ ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ಪರೀಕ್ಷೆಗಳ ಮೌಲ್ಯಂಕನದ ಗ್ರೇಡನ್ನು ನಮೂದಿಸಲು ತಿಳಿಸಲಾಗಿತ್ತು.

2018-19ನೇ ಸಾಲಿನಿಂದ ಆರ್.ಟಿ.ಇ. ಯಲ್ಲಿ ದಾಖಲಾದ ಮಕ್ಕಳ ಮತ್ತು ವ್ಯಾಸಂಗ ಮಾಡುತ್ತಿರುವ ತರಗತಿಯ ಮಾಹಿತಿಗಳನ್ನು ಸಾಟ್ಸ್ ತಂತ್ರಾಂಶದ ಮುಖೇನ ಸೆಳೆಯಲಾಗುತ್ತಿದೆ. ಸದರಿ ಪ್ರಕ್ರಿಯೆಯನ್ನು ಪ್ರತಿ ವಿದ್ಯಾರ್ಥಿಯ ಹಾಜರಾತಿ ಹಾಗೂ ಗ್ರೇಡ್‌ಗಳನ್ನು ಸಾಟ್ಸ್ ತಂತ್ರಾಂಶದಿಂದಲೇ ಸೆಳೆಯಲು ಉದ್ದೇಶಿಸಿರು ವುದರಿಂದ ಸಾಟ್ಸ್ ತಂತ್ರಾಂಶದಲ್ಲಿ ಅಪೂರ್ಣ ಮಾಹಿತಿ ನೀಡುತ್ತಿರುವ ಶಾಲೆಗಳಿಗೆ 2018-19ನೇ ಸಾಲಿನ ಶುಲ್ಕ ಮರುಪಾವತಿ ಮೊತ್ತವನ್ನು ಬಿಡುಗಡೆಗೊಳಿಸಲಾಗುವುದಿಲ್ಲ.

ಶಾಲೆಗಳು ಸಾಟ್ಸ್ ತಂತ್ರಾಂಶದಲ್ಲಿ ನಮೂದಿಸಿರುವ ಮಾಹಿತಿಗಳನ್ನು ಪರಿಶೀಲಿಸಿದಾಗ ಶಾಲೆಯವರಿಂದ ಆಗಿರುವ ಕೆಲವು ದೋಷಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ. ಒಂದೇ ಶಾಲೆಯಲ್ಲಿರುವ ಎಲ್ಲಾ ತರಗತಿಗಳ ಒಟ್ಟು ಕಾರ್ಯ ನಿರ್ವಹಿಸಿದ ದಿನಗಳು 01.07.2018 ರಿಂದ 30.11.2018 ರವರೆಗೆ ಒಂದೇ ರೀತಿಯಲ್ಲಿ ಇಲ್ಲದಿರುವುದನ್ನು ಗಮನಿಸಲಾಗಿದೆ. ( ಉದಾ:ಒಂದೇ ಶಾಲೆಯ 1ನೇ ತರಗತಿ ಮತ್ತು 2ನೇ ತರಗತಿಯ ಕಾರ್ಯ ನಿರ್ವಹಿಸಿದ ಶಾಲಾ ದಿನಗಳಲ್ಲಿ ವ್ಯತ್ಯಾಸಗಳು ಇರುತ್ತದೆ. ಯಾವುದೇ ಕಾರಣಕ್ಕೂ ಶಾಲೆಯ ಒಟ್ಟು ಕಾರ್ಯ ನಿರ್ವಹಿಸಿದ ದಿನಗಳು ಬೇರೆ ಬೇರೆ ತರಗತಿಗೆ ಬೇರೆ ಬೇರೆಯಾಗಿ ಇರತಕ್ಕದ್ದಲ್ಲ.

ಕೆಲವು ಶಾಲೆಗಳು FA-1, FA -2, ಮತ್ತು SA-1 ರ ಮೌಲ್ಯಮಾಪನಕ್ಕೆ ಸಂಬಂಧಿಸಿದ ಗ್ರೇಡ್ ಗಳನ್ನು ಅಪ್‌ಡೇಟ್ ಮಾಡದೆ "_" (ಹೈಪನ್) ಚಿಹ್ನೆಯನ್ನು ನಮೂದಿಸಿರುತ್ತಾರೆ. ಶಾಲೆಯಲ್ಲಿರುವ

ಎಲ್ಲಾ ಆರ್.ಟಿ.ಇ. ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಅವರಿಗೆ ಸಂಬಂಧಿಸಿದ FA-1, FA -2,ಮತ್ತು SA-1 ರ ಮೌಲ್ಯಮಾಪನದ ಗ್ರೇಡ್‌ಗಳನ್ನು ಸಾಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಒಂದು ವೇಳೆ ಆರ್.ಟಿ.ಇ. ಮಕ್ಕಳ ಹಾಜರಾತಿ ಶೂನ್ಯವಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಹಾಜರಾತಿ ಕಾಲಂನಲ್ಲಿ "0" ಎಂದು ನಮೂದಿಸತಕ್ಕದ್ದು ಮತ್ತು ಗ್ರೇಡ್ ಕಾಲಂಗಳಲ್ಲೂ ಸಹ "0" ಎಂದು ನಮೂದಿಸತಕ್ಕದ್ದು.

ಯಾವುದೇ ಆರ್.ಟಿ.ಇ. ವಿದ್ಯಾರ್ಥಿಯ ಹಾಜರಾತಿಯನ್ನಾಗಲೀ ಅಥವಾ ಮೌಲ್ಯಂಕನ ಗ್ರೇಡ್‌ಗಳನ್ನು ನಮೂದಿಸದಿದ್ದಲ್ಲಿ ಆ ಶಾಲೆಯ 2ನೇ ಕಂತಿನ ಶುಲ್ಕ ಮರುಪಾವತಿಯನ್ನು ಮಾಡಲಾಗುವುದಿಲ್ಲ. ಇದಕ್ಕೆ ಆಯಾ ಶಾಲೆಯ ಮುಖ್ಯಸ್ಥರೇ ನೇರ ಹೊಣೆಗಾರರಾಗಿರುತ್ತಾರೆ. ಮೇಲ್ಕಂಡ ಅಂಶಗಳನ್ನು ತಮ್ಮ ಅಧೀನದಲ್ಲಿರುವ ಎಲ್ಲಾ ಶಾಲೆಗಳ ಮುಖ್ಯಸ್ಥರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಆರ್.ಟಿ.ಇ. ನೋಡಲ್ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡತಕ್ಕದ್ದು.

2018- 19ನೇ ಸಾಲಿನ ಮೊದಲನೇ ಕಂತಿನ ಶುಲ್ಕ ಮರುಪಾವತಿ ಪಡೆದ ಶಾಲೆಗಳು ಹಾಜರಾತಿ ಹಾಗೂ ಗ್ರೇಡ್‌ಗಳನ್ನು ಸಾಟ್ಸ್ ತಂತ್ರಾಂಶದಲ್ಲಿ ನಮೂದಿಸಲು ಕೊನೆಯ ದಿ:19.3.2019 ಆಗಿರುತ್ತದೆ. ಯಾವುದೇ ಕಾರಣಕ್ಕೂ ಸದರಿ ಕೊನೆಯ ದಿನಾಂಕವನ್ನು ವಿಸ್ತರಿಸಲು ಅವಕಾಶವಿಲ್ಲ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

12/3/19

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಆರ್.ಟಿ. ಇ. ಅಡಿ ದಾಖಲಾಗಿರುವ ಶಾಲೆಗಳ ಮುಖ್ಯಸ್ಥರುಗಳಿಗೆ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

ಪ್ರತಿಯನ್ನು

1. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ) ವಿಭಾಗ, ಇವರಿಗೆ ಮಾಹಿತಿಗಾಗಿ
2. ಹಿರಿಯ ಸಹಾಯಕ ನಿರ್ದೇಶಕರು ಸಾಟ್ಸ್ ವಿಭಾಗ ಎಸ್.ಎಸ್.ಎ. ಇವರಿಗೆ ಮಾಹಿತಿಗಾಗಿ